# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೦೯, ಮಾರ್ಚ್, ೨೦೨೧ (ಫಾಲ್ಗುಣ, ೧೮, ಶಕವರ್ಷ, ೧೯೪೨)<br>BENGALURU, TUESDAY, 09, MARCH, 2021 (PHALGUNA , 18, SHAKAVARSHA, 1942) | ನಂ. ೨೩೮<br>No. 238 |
|---|---|---|


**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**NINTH SESSION**

**(Adjourned Meeting)**

## THE KARNATAKA SOCIETIES REGISTRATION (AMENDMENT) BILL, 2021

## (LA Bill No. 13 of 2021)

A Bill further to amend the Karnataka Societies Registration Act, 1960.

Whereas, it is expedient further to amend the Karnataka Societies Registration Act, 1960 (Karnataka Act 17 of 1960) for the purposes hereinafter appearing.

Be it enacted by the Karnataka State Legislature in the seventy second year of the Republic of India, as follows:-

**1. Short title and commencement.-**(1) This Act may be called the Karnataka Societies Registration (Amendment) Act, 2021.

(2) It shall come into force at once.

**2. Substitution of section-27A.-**For section 27A of the Karnataka Societies Registration Act, 1960 (Karnataka Act No. 17 of 1960), the following shall be substituted, namely:-

**"27A.-Appointment of an Administrator:-**Not withstanding anything contained in this Act,-

(1) (a) Where any society belonging to minority or otherwise on account of pendency of the litigation or otherwise has not held or is unable to hold annual general meeting; or

(b) Where the term of office of the members of the governing body of a society belonging to minority or otherwise has expired and a new governing body has not for any reason been constituted; or

(c) where on a report made by the Registrar or otherwise, on enquiry, the State Government considers it necessary in public interest so to do,

the State Government may, by order published in the official Gazette, appoint an Administrator for such society for such period, not exceeding six months, as may be specified in the order, to manage the affairs of the society:

Provided that for reasons to be recorded in writing, the State Government may, by like order, extend either prospectively or retrospectively, the said period by any further period not exceeding six months at a time, so however subject to the provisions of sub-section (5) the aggregate period shall not extend beyond four years.

(2) The expenditure incurred by the State Government towards the salary and allowances of the Administrator shall be paid to the State Government from out of the funds of the society.

(3) On the appointment of the Administrator under sub-section (1) and during the period of such appointment, the governing body of the society shall cease to exercise any powers and perform and discharge any functions or duties conferred or imposed on it by this Act, or its memorandum of association or the rules and regulations or any other law and subject to any directions which the State Government, may from time to time issue, all such functions or duties shall be performed or discharged by the Administrator.

(4) The Administrator shall, before the expiry of the period of his appointment take necessary action to convene the general body meeting of the society and hold elections for the constitution of the governing body.

(5) If the Administrator is not, for reasons beyond his control, able to convene the general body meeting or inspite of such meeting being convened, the general body fails to elect the governing body, the Administrator shall forthwith send a report to the State Government, who shall pass such orders as are considered necessary, either extending the period of appointment of the Administrator for a further period or if satisfied that public interest so requires, for the dissolution of the society.

(6) The State Government may, if it thinks fit, appoint an advisory Council to advise and assist the administrator appointed under sub-section (1) in the exercise of the powers and performance and discharge of the duties and functions conferred or imposed on him under this Act. The members of the Advisory Council shall hold office during the pleasure of the State Government.

(7) It shall be competent of the State Government, by order and for reasons to be recorded in writing, to dissolve a society with effect from such date as may be specified in the order.

Provided that, the State Government shall before issuing an order dissolving a society, communication to the governing body of the society the proposal to dissolve, fix a reasonable time for the governing body for making a representation against the proposal and consider its representation, if any.

Provided further that, the State Government may, after settling the liabilities, if any, of the dissolved society, make over its properties, whether movable or immovable, to any other society having identical or similar objects to be determined by the votes of not less than three fifth of members present personally or by proxy and where there is no such society, the property shall vest in such officer or authority, as may be specified by the State Government in this behalf, until a society having identical or similar object is formed where after the properties shall stand transferred to such society.

(8) On the date fixed for the dissolution of a society under sub-section (1), the registration, of the society shall stand cancelled and the society shall cease to exist as a corporate body.

**STATEMENT OF OBJECTS AND REASONS**

It is considered necessary further to amend the Karnataka Societies Registration Act, 1960 (Karnataka Act No. 17 of 1960) in view of the decision of the Hon'ble High Court of Karnataka in Writ Petition No. 15753/1986 dated: 03-02-1987 where in section 27A of the Karnataka Societies Registration Act, 1960 was struck down being violative of Article 30(1) of the Constitution of India and further Writ Appeal No. 357/1987 was also dismissed on 7-3-1991,-

(1) to avoid further litigations and safeguard the interest of the Government, members of the society and the general public; and

(2) to remove discrimination between general societies and minority societies.

Hence the Bill.

**FINANCIAL MEMORANDUM**

There is no extra expenditure involved in the proposed legislative measure.

**S.T. SOMASHEKAR**
Minister for Co-Operation

**M.K. VISHALAKSHI**
Secretary (I/c)
Karnataka Legislative Assembly

**ANNEXURE**

**EXTRACT FROM THE KARNATAKA SOCIETIES REGISTRATION ACT, 1960.**
**(KARNATAKA ACT 17 OF 1960)**

**xx** **xx** **xx**

**27A. Appointment of Administrator.-** Notwithstanding anything in this Act,—
(1)(a) where any society on account of the pendency of litigation or otherwise has not held or is unable to hold the annual general meeting; or

(b) where the term of office of the members of the governing body of a society has expired and a new governing body has not for any reason been constituted; or

(c) where on a report made by the Registrar or otherwise, on enquiry, the State Government considers it necessary in public interest so to do,

-the State Government may, by order published in the official Gazette, appoint an Administrator for such society for such period, not exceeding six months, as may be specified in the order, to manage the affairs of the society:

Provided that for reasons to be recorded in writing, the State Government may, by like order, extend either prospectively or retrospectively, the said period by any further periods not exceeding six months at a time, so however subject to the provisions of clause (5), the aggregate period shall not extend beyond four years.

(2) the expenditure incurred by the State Government towards the salary and allowances of the Administrator shall be paid to the State Government from out of the funds of the society;

(3) on the appointment of the Administrator under clause (1) and during the period of such appointment the governing body of the society shall cease to exercise any powers and perform and discharge any functions or duties conferred or imposed on it by this Act, or its memorandum of association or the rules and

regulations or any other law and subject to any directions which the State Government, may from time to time issue, all such functions or duties shall be performed or discharged by the Administrator;

(4) the Administrator shall, before the expiry of the period of his appointment take necessary action to convene the general body meeting of the society and hold elections for the constitution of the governing body;

(5) if the Administrator is not, for reasons beyond his control, able to convene the general body meeting or inspite of such meeting being convened, the general body fails to elect the governing body, the Administrator shall forthwith send a report to the State Government, who may pass such orders as are considered necessary, either extending the period of appointment of the Administrator for a further period or if satisfied that public interest so requires, for the dissolution of the society;

(5A) the State Government may, if it thinks fit, appoint an Advisory Council to advise and assist the administrator appointed under sub-section (1) in the exercise of the powers and performance and discharge of the duties and functions conferred or imposed on him under this Act. The members of the Advisory Council shall hold office during the pleasure of the State Government.

(6) where an order of dissolution is passed under sub-section (5) the assets of the society shall vest in and the liabilities shall devolve on the State Government.

**xx** **xx** **xx**

**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಒಂಭತ್ತನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ಸೊಸೈಟಿಗಳ ನೋಂದಣಿ (ತಿದ್ದುಪಡಿ) ವಿಧೇಯಕ 2021

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-13)**

ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ನ್ನು (1960ರ ಕರ್ನಾಟಕ ಅಧಿನಿಯಮ 17) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸೊಸೈಟಿಗಳ ನೋಂದಣಿ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 27ಎ ಪ್ರಕರಣದ ಪ್ರತಿಯೋಜನೆ.-** ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ (1960ರ ಕರ್ನಾಟಕ ಅಧಿನಿಯಮ 17) 27ಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**" 27ಎ ಆಡಳಿತಾಧಿಕಾರಿಯ ನೇಮಕ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ,-

(1) (ಎ) ಅಲ್ಪಸಂಖ್ಯಾತರಿಗೆ ಸೇರಿದ ಅಥವಾ ಅನ್ಯಥಾ ಯಾವುದೇ ಸೊಸೈಟಿಯು, ವ್ಯಾಜ್ಯವು ಬಾಕಿಯಿರುವ ಕಾರಣದಿಂದಾಗಿ ಅಥವಾ ಅನ್ಯಥಾ ವಾರ್ಷಿಕ ಮಹಾಸಭೆಯನ್ನು ನಡೆಸಿಲ್ಲದಿದ್ದರೆ ಅಥವಾ ನಡೆಸಲು ಅಸಮರ್ಥವಾದರೆ; ಅಥವಾ

(ಬಿ) ಅಲ್ಪಸಂಖ್ಯಾತರಿಗೆ ಸೇರಿದ ಅಥವಾ ಅನ್ಯಥಾ ಸೊಸೈಟಿಯ ಆಡಳಿತ ಮಂಡಳಿಯ ಸದಸ್ಯರ ಪದಾವಧಿಯು ಮುಕ್ತಾಯಗೊಂಡಿದ್ದರೆ ಮತ್ತು ಹೊಸ ಆಡಳಿತ ಮಂಡಳಿಯನ್ನು ಯಾವುದೇ ಕಾರಣಕ್ಕಾಗಿ ರಚಿಸಿಲ್ಲದಿದ್ದರೆ; ಅಥವಾ

(ಸಿ) ರಿಜಿಸ್ಟ್ರಾರ್ ಅಥವಾ ಅನ್ಯಥಾ ಮಾಡಿದ ವರದಿಯ ಮೇಲೆ ವಿಚಾರಣೆಯ ಮೇರೆಗೆ, ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅಗತ್ಯವೆಂದು ಪರಿಗಣಿಸಿದರೆ,

- ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಸೊಸೈಟಿಯ ವ್ಯವಹಾರಗಳ ನಿರ್ವಹಣೆಗೆ ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಆರು ತಿಂಗಳುಗಳು ಮೀರದಿರುವ ಅಂಥ ಅವಧಿಗಾಗಿ ಅಂಥ ಸೊಸೈಟಿಗೆ ಆಡಳಿತಾಧಿಕಾರಿಯನ್ನು ನೇಮಿಸಬಹುದು:

ಪರಂತು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಾಜ್ಯ ಸರ್ಕಾರವು ಆದೇಶದ ಮೂಲಕ, ಭವಿಷ್ಯವರ್ತಿಯಾಗಿ ಅಥವಾ ಪೂರ್ವಾನ್ವಯವಾಗಿ ಸದರಿ ಅವಧಿಯನ್ನು ಒಂದು ಬಾರಿಗೆ ಆರು ತಿಂಗಳುಗಳು ಮೀರದಿರುವ ಯಾವುದೇ ಮುಂದುವರಿದ ಅವಧಿಗೆ, ಆದಾಗ್ಯೂ (5)ನೇ

ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಸರಾಸರಿ ಅವಧಿಯು ನಾಲ್ಕು ವರ್ಷಗಳನ್ನು ಮೀರದಂತೆ ವಿಸ್ತರಿಸಬಹುದು.

(2) ಆಡಳಿತಾಧಿಕಾರಿಯ ವೇತನ ಮತ್ತು ಭತ್ಯೆಗಳಿಗೆ ರಾಜ್ಯ ಸರ್ಕಾರವು ಭರಿಸಿದ ವೆಚ್ಚವನ್ನು ಸೊಸೈಟಿಯ ನಿಧಿಗಳಿಂದ ರಾಜ್ಯ ಸರ್ಕಾರಕ್ಕೆ ಪಾವತಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಆಡಳಿತಾಧಿಕಾರಿಯ ನೇಮಕವಾದಾಗ ಮತ್ತು ಅಂಥ ನೇಮಕದ ಅವಧಿಯಲ್ಲಿ ಸೊಸೈಟಿಯ ಆಡಳಿತ ಮಂಡಳಿಯು, ಈ ಅಧಿನಿಯಮದ ಅಥವಾ ಅದರ ಸಂಘದ ಜ್ಞಾಪನ ಪತ್ರ ಅಥವಾ ನಿಯಮಗಳು ಮತ್ತು ವಿನಿಯಮಗಳು ಅಥವಾ ಯಾವುದೇ ಇತರ ಕಾನೂನು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಬಹುದಾದ ಯಾವುದೇ ನಿರ್ದೇಶನಗಳ ಮೂಲಕ ಅದಕ್ಕೆ ಪ್ರದತ್ತವಾದ ಅಥವಾ ವಿಧಿಸಲಾದ ಯಾವುದೇ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಯಾವುದೇ ಪ್ರಕಾರ್ಯಗಳು ಅಥವಾ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ನೆರವೇರಿಸುವುದು ನಿಂತು ಹೋಗತಕ್ಕದ್ದು, ಅಂಥ ಎಲ್ಲಾ ಪ್ರಕಾರ್ಯಗಳು ಅಥವಾ ಕರ್ತವ್ಯಗಳನ್ನು ಆಡಳಿತಾಧಿಕಾರಿಯು ನಿರ್ವಹಿಸತಕ್ಕದ್ದು ಅಥವಾ ನೆರವೇರಿಸತಕ್ಕದ್ದು.

(4) ಆಡಳಿತಾಧಿಕಾರಿಯು ಆತನ ನೇಮಕ ಅವಧಿಯು ಮುಕ್ತಾಯವಾಗುವ ಮೊದಲು ಸೊಸೈಟಿಯ ಸರ್ವಸದಸ್ಯ ಸಭೆಯನ್ನು ಕರೆಯಲು ಮತ್ತು ಆಡಳಿತ ಮಂಡಳಿಯ ರಚನೆಗಾಗಿ ಚುನಾವಣೆಗಳನ್ನು ನಡೆಸಲು ಅಗತ್ಯ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

(5) ಆಡಳಿತಾಧಿಕಾರಿಯು ಆತನ ವ್ಯಾಪ್ತಿಯನ್ನು ಮೀರಿದ ಕಾರಣಗಳಿಗಾಗಿ ಸರ್ವ ಸದಸ್ಯರ ಸಭೆಯನ್ನು ಕರೆಯಲು ಸಾಧ್ಯವಾಗದಿದ್ದಲ್ಲಿ ಅಥವಾ ಅಂಥ ಸಭೆಯನ್ನು ಕರೆದ ಮೇಲೂ ಸರ್ವ ಸದಸ್ಯ ಸಭೆಯು ಆಡಳಿತ ಮಂಡಳಿಯನ್ನು ಚುನಾಯಿಸಲು ವಿಫಲವಾದಲ್ಲಿ, ಆಡಳಿತಾಧಿಕಾರಿಯು ತಕ್ಷಣವೇ ರಾಜ್ಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು, ಸರ್ಕಾರವು ಆಡಳಿತಾಧಿಕಾರಿಯ ನೇಮಕದ ಅವಧಿಯನ್ನು ಮುಂದುವರೆದ ಅವಧಿಯವರೆಗೆ ವಿಸ್ತರಿಸಬಹುದು ಅಥವಾ ಸಾರ್ವಜನಿಕ ಹಿತಾಸಕ್ತಿಯಲ್ಲಿ ಸೊಸೈಟಿಯ ವಿಘಟನೆಯ ಅಗತ್ಯವೆಂದು ಮನಗಂಡರೆ, ಅವಶ್ಯವೆಂದು ಪರಿಗಣಿಸುವ ಅಂಥ ಆದೇಶಗಳನ್ನು ಮಾಡತಕ್ಕದ್ದು.

(6) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಿಸಿದ ಆಡಳಿತಾಧಿಕಾರಿಗೆ ಈ ಅಧಿನಿಯಮದ ಅಡಿಯಲ್ಲಿ ಆತನಿಗೆ ಪ್ರದತ್ತವಾದ ಅಥವಾ ವಿಧಿಸಲಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಹಾಗೂ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಮತ್ತು ನೆರವೇರಿಸುವಲ್ಲಿ ಸಲಹೆ ನೀಡಲು ಮತ್ತು ಸಹಕರಿಸಲು ಸಲಹಾ ಪರಿಷತ್ತನ್ನು ನೇಮಿಸಬಹುದು. ಸಲಹಾ ಪರಿಷತ್ತಿನ ಸದಸ್ಯರು ರಾಜ್ಯ ಸರ್ಕಾರವು ಇಚ್ಛಿಸುವ ಅವಧಿಯವರೆಗೆ ಹುದ್ದೆಗಳನ್ನು ಹೊಂದಿರತಕ್ಕದ್ದು.

(7) ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಮತ್ತು ಆದೇಶದ ಮೂಲಕ ಸೊಸೈಟಿಯೊಂದನ್ನು ವಿಘಟಿಸಲು ರಾಜ್ಯ ಸರ್ಕಾರವು ಸಕ್ಷಮವಾಗಿರತಕ್ಕದ್ದು:

ಪರಂತು, ಸೊಸೈಟಿಯೊಂದನ್ನು ವಿಘಟಿಸುವ ಆದೇಶವನ್ನು ಹೊರಡಿಸುವ ಮೊದಲು ರಾಜ್ಯ ಸರ್ಕಾರವು, ರದ್ದತಿ ಪ್ರಸ್ತಾವನೆಯನ್ನು ಸೊಸೈಟಿಯ ಆಡಳಿತ ಮಂಡಳಿಗೆ ತಿಳಿಸತಕ್ಕದ್ದು, ಪ್ರಸ್ತಾವನೆಗೆ ಪ್ರತಿಯಾಗಿ ಅಹವಾಲನ್ನು ಸಲ್ಲಿಸುವುದಕ್ಕಾಗಿ ಆಡಳಿತ ಮಂಡಳಿಗೆ ಸೂಕ್ತ ಸಮಯವನ್ನು ನಿಗದಿಪಡಿಸತಕ್ಕದ್ದು ಮತ್ತು ಅದರ ಅಹವಾಲು ಯಾವುದಾದರೂ ಇದ್ದಲ್ಲಿ ಅದನ್ನು ಪರಿಗಣಿಸತಕ್ಕದ್ದು:

ಮತ್ತು ಪರಂತು, ವಿಘಟನೆಗೊಂಡ ಸೊಸೈಟಿಯ ಹೊಣೆಗಾರಿಕೆಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ಇತ್ಯರ್ಥಗೊಳಿಸಿದ ತರುವಾಯ ರಾಜ್ಯ ಸರ್ಕಾರವು ಅದರ ಚರ ಅಥವಾ ಸ್ಥಿರ

ಸ್ವತ್ತುಗಳನ್ನು, ವೈಯಕ್ತಿಕವಾಗಿ ಅಥವಾ ಬದಲಾಳುವಿನ ಮೂಲಕ ಹಾಜರಿರುವ ಸದಸ್ಯರ ಐದನೇ ಮೂರರಷ್ಟು ಕಡಿಮೆಯಲ್ಲದ ಮತಗಳ ಮೂಲಕ ನಿರ್ಧರಿಸಬೇಕಾದ ಏಕರೂಪದ ಅಥವಾ ಅದೇ ರೀತಿಯ ಉದ್ದೇಶಗಳುಳ್ಳ ಯಾವುದೇ ಇತರ ಸೊಸೈಟಿಗೆ ವಹಿಸಬಹುದು ಹಾಗೂ ಅಂಥ ಸೊಸೈಟಿಯು ಇಲ್ಲದಿದ್ದರೆ, ಏಕರೂಪದ ಅಥವಾ ಅದೇ ರೀತಿಯ ಉದ್ದೇಶಗಳುಳ್ಳ ಸೊಸೈಟಿಯು ರಚನೆಯಾಗುವವರೆಗೆ ಅಂಥ ಸೊಸೈಟಿಗೆ ಸ್ವತ್ತುಗಳು ವರ್ಗಾವಣೆಗೊಳ್ಳುವ ತರುವಾಯ, ಈ ಕುರಿತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಿ ಅಥವಾ ಪ್ರಾಧಿಕಾರದಲ್ಲಿ ಸ್ವತ್ತು ನಿಹಿತಗೊಳ್ಳತಕ್ಕದ್ದು.

(8) (1)ನೇ ಪ್ರಕರಣದ ಅಡಿಯಲ್ಲಿ ಸೊಸೈಟಿಯ ವಿಘಟನೆ ದಿನಾಂಕವನ್ನು ನಿಗದಿಪಡಿಸಿದ ಮೇಲೆ, ಸೊಸೈಟಿಯ ನೋಂದಣಿಯು ಕೂಡಲೇ ರದ್ದಾಗತಕ್ಕದ್ದು ಮತ್ತು ಸೊಸೈಟಿಯು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 15753/1986ರ ದಿನಾಂಕ 03.02.1987ರ ತೀರ್ಪಿನಲ್ಲಿ ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ 27ಎ ಪ್ರಕರಣವು ಸಂವಿಧಾನದ 30(1)ನೇ ಅನುಚ್ಛೇದದ ಉಲ್ಲಂಘನೆಯಾಗಿರುವುದರಿಂದ ಮತ್ತು 07.03.1991ರಂದು ರಿಟ್ ಅಪೀಲು ನಂ. : 357/1987 ಕೂಡ ವಜಾಗೊಂಡಿರುವ ಕಾರಣ;-

(1) ಮತ್ತಷ್ಟು ವ್ಯಾಜ್ಯಗಳನ್ನು ತಪ್ಪಿಸಲು ಹಾಗೂ ಸರ್ಕಾರದ ಸೊಸೈಟಿಯ ಸದಸ್ಯರ ಮತ್ತು ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡಲು; ಮತ್ತು

(2) ಸಾಮಾನ್ಯ ಸೊಸೈಟಿಗಳು ಮತ್ತು ಅಲ್ಪಸಂಖ್ಯಾತ ಸೊಸೈಟಿಗಳ ನಡುವಿನ ತಾರತಮ್ಯವನ್ನು ತೊಡೆದು ಹಾಕಲು

- ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ 1960ನ್ನು (1960ರ ಕರ್ನಾಟಕ ಅಧಿನಿಯಮ ನಂ. 17) ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ

ಆದ್ದರಿಂದ ಈ ವಿಧೇಯಕ

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಸ್.ಟಿ. ಸೋಮಶೇಖರ್**
ಸಹಕಾರ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ 1960ರ ( 1960ರ ಕರ್ನಾಟಕ ಅಧಿನಿಯಮ 17) ಉದ್ಧೃತ ಭಾಗ**

**Xx Xx Xx**

**27-ಎ, ಆಡಳಿತಾಧಿಕಾರಿಗಳ ನೇಮಕ:-** ಈ ಅಧಿನಿಯಮದಲ್ಲಿ ಏನೇ ಹೇಳಿದಾಗ್ಯೂ-(1) (ಎ) ಯಾವುದೇ ಸೊಸೈಟಿ, ವ್ಯಾಜ್ಯ ಬಾಕಿ ಇರುವ ಅಥವಾ ಅನ್ಯಥಾ ವಾರ್ಷಿಕ ಸಾಧಾರಣ ಸಭೆಯನ್ನು ನಡೆಸದೇ ಇದ್ದರೆ ಅಥವಾ ನಡೆಸಲು ಅಶಕ್ಯವಾಗಿದ್ದರೆ: ಅಥವಾ

(ಬಿ) ಆಡಳಿತ ಮಂಡಳಿಯ ಸದಸ್ಯರ ಅವಧಿ ಮುಕ್ತಾಯವಾಗಿದ್ದು ಯಾವುದೇ ಕಾರಣಕ್ಕೆ ಹೊಸ ಆಡಳಿತ ಮಂಡಳಿ ರಚಿತವಾಗಿದ್ದರೆ: ಅಥವಾ

(ಸಿ) ವಿಚಾರಣೆಯ ಮೇಲೆ ನೋಂದಣಿ ಅಧಿಕಾರಿ ವರದಿ ಮಾಡಿದ್ದರ ಮೇಲೆ ಅಥವಾ ಅನ್ಯಥಾ ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯಕವೆಂದು ಪರ್ಯಾಲೋಚಿಸಿದರೆ, ಸೊಸೈಟಿಯ ವ್ಯವಹಾರ ನಿರ್ವಹಿಸುವುದಕ್ಕಾಗಿ ಅಂಥ ಸೊಸೈಟಿಗೆ ಆರು ತಿಂಗಳು ಮೀರದಂಥ ಅವಧಿಗೆ, ಆದೇಶದಲ್ಲಿ ನಿರ್ದಿಷ್ಟಪಡಿಸಿದಂತೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯ ಮೂಲಕ ಆದೇಶ ಮಾಡಿ ಸರ್ಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡಬಹುದು.

ಪರಂತು ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಕ್ಕಾಗಿ ಸರ್ಕಾರ ಅಂಥದೇ ಆದೇಶದ ಮೂಲಕ ಸದರಿ ಅವಧಿಯನ್ನು ಪೂರ್ವಾನ್ವಯವಾಗುವಂತೆ ಅಥವಾ ಉತ್ತರಾನ್ವಯವಾಗುವಂತೆ ಮುಂದಿನ ಅವಧಿಗೆ ಒಂದು ಸಲಕ್ಕೆ ಆರು ತಿಂಗಳಿಗಿಂತ ಹೆಚ್ಚಾಗದಂತೆ, ಖಂಡ (5)ರ ಉಪಬಂಧಗಳಿಗೊಳಪಟ್ಟು, ಅದಾಗ್ಯೂ ಒಟ್ಟು ನಾಲ್ಕು ವರ್ಷ ಅವಧಿ ಮೀರದಂತೆ ವಿಸ್ತರಿಸಬಹುದು.

(೨) ಆಡಳಿತಾಧಿಕಾರಿಯ ವೇತನ ಮತ್ತು ಭತ್ಯೆಗಳಿಗೆ ರಾಜ್ಯ ಸರ್ಕಾರ ವಹಿಸಿದ ವೆಚ್ಚವನ್ನು ಸೊಸೈಟಿಯ ನಿಧಿಯಿಂದ ಪಾವತಿ ಮಾಡತಕ್ಕದ್ದು.

(3) ಉಪ-ಪ್ರಕರಣ (1)ರ ಕೆಳಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ ಮೇಲೆ ಮತ್ತು ಅಂಥ ನೇಮಕದ ಅವಧಿಯಲ್ಲಿ ಸೊಸೈಟಿಯ ಆಡಳಿತ ಮಂಡಳಿ ಈ ಅಧಿನಿಯಮ ಅಥವಾ ಅದರ ಸಂಘದ ಸಂಸ್ಥಾಪನಾ ಪತ್ರ ಅಥವಾ ನಿಯಮ ನಿಬಂಧನೆಗಳು ಅಥವಾ ಇತರ ಯಾವುದೇ ಕಾನೂನಿನ ಕೆಳಗೆ ಪ್ರಧಾನವಾದ ಅಥವಾ ಹೊರಿಸಿದ ಯಾವುದೇ ಅಧಿಕಾರವನ್ನು ಮತ್ತು ಯಾವುದೇ ಕೆಲಸ ಅಥವಾ ಕರ್ತವ್ಯಗಳನ್ನು ನಿರ್ವಹಿಸುವುದನ್ನು ನಿಲ್ಲಿಸತಕ್ಕದ್ದು ರಾಜ್ಯ ಸರ್ಕಾರ ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೊಳಪಟ್ಟು ಅಂಥ ಎಲ್ಲ ಕೆಲಸ ಅಥವಾ ಕರ್ತವ್ಯಗಳನ್ನು ಆಡಳಿತಾಧಿಕಾರಿ ಪಾಲಿಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು.

(4) ಆಡಳಿತಾಧಿಕಾರಿ ತನ್ನ ನೇಮಕಾವಧಿ ಮುಕ್ತಾಯವಾಗುವ ಮೊದಲು ಆಡಳಿತ ಮಂಡಳಿಯನ್ನು ರಚಿಸುವುದಕ್ಕಾಗಿ ಸೊಸೈಟಿಯ ಸಾಮಾನ್ಯ ಸಭೆಯನ್ನು ಕರೆದು ಚುನಾವಣೆ ನಡೆಸಲು ಅವಶ್ಯಕ ಕ್ರಮ ಕೈಗೊಳ್ಳತಕ್ಕದ್ದು.

(5) ಆಡಳಿತಾಧಿಕಾರಿಯು ತನ್ನ ಹತೋಟಿ ಮೀರಿದ ಕಾರಣಗಳಿಂದಾಗಿ ಸಾಮಾನ್ಯ ಸಭೆಯನ್ನು ಕರೆಯಲು ಸಾಧ್ಯವಾಗದಿದ್ದರೆ ಅಥವಾ ಸಭೆಯನ್ನು ಕರೆದಾಗ್ಯೂ ಸಾಮಾನ್ಯ ಸಭೆ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲು ವಿಫಲವಾದರೆ ಆಡಳಿತಾಧಿಕಾರಿಯು ಕೂಡಲೇ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಸರ್ಕಾರಕ್ಕೆ ವರದಿಯನ್ನು ಕಳಿಸತಕ್ಕದ್ದು ಅದು ಆಡಳಿತಾಧಿಕಾರಿಯ ನೇಮಕದ ಅವಧಿಯನ್ನು ಮುಂದುವರೆಸಿ ವಿಸ್ತರಿಸುವ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಾಗಿದೆಯೆಂದು ಮನವರಿಕೆಯಾದರೆ ಸೊಸೈಟಿಯ ವಿಘಟನೆ ಮಾಡುವ ಬಗ್ಗೆ ಪರ್ಯಾಲೋಚನೆ ಮಾಡಿ ಅವಶ್ಯಕವಾದಂಥ ಆದೇಶ ಮಾಡಬಹುದು.

(5-ಎ) ರಾಜ್ಯ ಸರ್ಕಾರ, ಅದಕ್ಕೆ ಯೋಗ್ಯವೆನಿಸಿದರೆ, ಉಪ ಪ್ರಕರಣ (1)ರ ಕೆಳಗೆ ನೇಮಿಸಲ್ಪಟ್ಟ ಆಡಳಿತಾಧಿಕಾರಿಗೆ ಅಧಿನಿಯಮದ ಕೆಳಗೆ ಪ್ರಧಾನವಾದ ಅಥವಾ ಹೊರಿಸಿದ ಕರ್ತವ್ಯ ಮತ್ತು ಕೆಲಸಗಳನ್ನು ನಿರ್ವಹಿಸುವುದಕ್ಕೆ ಸಹಾಯ ಮಾಡುವುದಕ್ಕಾಗಿ ಸಲಹಾ ಪರಿಷತ್ತನ್ನು ನೇಮಕ ಮಾಡಬಹುದು. ಸಲಹಾ ಪರಿಷತ್ತಿನ ಸದಸ್ಯರು ರಾಜ್ಯ ಸರ್ಕಾರದ ಇಷ್ಟಪರ್ಯಾಂತ ಪದಾಧಿಕಾರದಲ್ಲಿರುತ್ತಾರೆ.

(6) ಉಪ-ಪ್ರಕರಣ (5)ರ ಕೆಳಗೆ ವಿಘಟನೆಗೆ ಆದೇಶ ಮಾಡಿದ್ದರೆ ಸೊಸೈಟಿಯ ಆಸ್ತಿಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗುತ್ತವೆ ಮತ್ತು ಹೊಣೆಗಳು ಪ್ರಾಪ್ತವಾಗುತ್ತವೆ.

Xx Xx Xx

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2021.03.09 19:33:27 +05'30'